ಅಂತ ಕೇಳಿದ. 'ಓಹೋ, ಸಂತೋಷದಿಂದ' ಎಂದು ತೆಗೆದುಕೊಟ್ಟಳು. ಸೂರಿ ಗರಬಡಿದವನಂತೆ ಅದನ್ನೇ ನೋಡುತ್ತ ಕುಳಿತ, 'ಏನು, ಫೋಟೊ ಅಷ್ಟು ಇಷ್ಟವಾಯಿತಾ? ಬೇಕಾ?' ಅಂದಳು. ಸೂರಿ ಕೃತಜ್ಞತೆಯಿಂದ ತಲೆ ಕೊಡವಿದ. ಭದ್ರವಾಗಿ ಶರ್ಟಿನ ಜೇಬಿನಲ್ಲಿಟ್ಟುಕೊಂಡ. 'ನಿನ್ನ ನೆನಪಾಗಿ ಇದು ಸದಾ ನನ್ನಲ್ಲಿರುತ್ತೆ' ಅಂದ. ಅವನಿಗೆ ಅರಿವಿಲ್ಲದೆಯೆ ಧ್ವನಿಯಲ್ಲಿನ ಏನೋ ಮಾರ್ದವತೆ ಅವನ ಹೃದಯದ ಭಾವನೆಯನ್ನು ಪ್ರಕಟಿಸಿತ್ತು. ಜೋನಳಿಗೆ ಅರ್ಥವಾಯಿತು. ಸಮಯ ಕಾಯುತ್ತಿದ್ದ ಅವಳು 'ನಿನ್ನ ಗುರುತಾಗಿ ನನಗೂ ಏನಾದರೂ ಬೇಕಲ್ಲ' ಎಂದು, ಎಲ್ಲಿ ಅವನು ಇಲ್ಲವೆನ್ನುವನೊ ಎಂಬ ಹಿಂಜರಿಕೆಯಿಂದಲೇ ಕೇಳಿದಳು. ಸೂರಿಗೆ ತಿಳಿದಂತೆ ಅವಳಿಗೆ ಕೊಡಲು ಅವನಲ್ಲೇನೂ ಇರಲಿಲ್ಲ. ಜೇಬಲ್ಲಿ ಕೊಂಚ ಹಣವಿತ್ತು, ಅವಳಲ್ಲಿರಬಹುದಾದ ಹಣದ ಮುಂದೆ ಅವನ ಎಂಟು ಹತ್ತು ರೂಪಾಯಿಯೂ ಹಣವೇ? ಅವಳಿಗೆ ಅವನ ಸಂಕೋಚ ಅರ್ಥವಾಯಿತು. 'ಒಂದು ಕೇಳಲಾ?' ಅಂದಳು. ಅವಳೇನು ಕೇಳಬಹುದೆಂಬ ಕಲ್ಪನೆಯೂ ಇಲ್ಲದೆ 'ಓಹೊ' ಅಂದ. ಅವನ ಕೈಯಲ್ಲಿ ಕೈಯನ್ನಿಟ್ಟು ಬೆರಳಿನ ಮೇಲೆ ಬೆರಳಾಡಿಸುತ್ತ 'ಈ ಉಂಗುರ ಯಾಕೆ ಕೊಡಬಾರದು? ನಮ್ಮಲ್ಲಿ ಇಂಥ ಸಂದರ್ಭಗಳಲ್ಲಿ ಉಂಗುರ ಕೊಡುವ ಪದ್ಧತಿಯಿದೆ. ಅದಕ್ಕಾಗಿ ಕೇಳ್ತಿದೀನಿ ಅಷ್ಟೇ' ಎಂದು ಅರ್ಥಗರ್ಭಿತವಾಗಿ ರಾಗ ತೆಗೆದಳು. ಬೆಳಗ್ಗೆ ಗುಂಡಿ ಹುಡುಕುವ ಸಂಭ್ರಮದಲ್ಲಿ ಅಮ್ಮನ ಟ್ರಂಕಿನಲ್ಲಿ ಕಂಡ ಉಂಗುರ ತೊಟ್ಟು ಬಂದಿದ್ದರ ನೆನಪೇ ಅವನಿಗಿರಲಿಲ್ಲ. 'ಅಯ್ಯೋ, ಅದೇನು ಜುಜುಬಿ, ಬೆಳ್ಳಿಗೆ ಗಿಲೀಟು ಹಚ್ಚಿ ಕಲ್ಲು ಜೋಡಿಸಿರಬೇಕು. ಅದನ್ನೇನೆಂದು ಕೊಡಲಿ?' ಅಂದ. ಒಂದು ಕ್ಷಣ ಜೋನಿಗೂ ತಬ್ಬಿಬ್ಬಾಯಿತು. ಉಂಗುರದ ಹರಳನ್ನೇ ದುರುಗುಟ್ಟಿ ನೋಡುತ್ತ, ಆದದ್ದಾಗಲಿ ಎಂದು 'ಉಡುಗೊರೆಗೆ ಬೆಲೆ ಕಟ್ಟುತ್ತಾರೆಯೇ? ನನ್ನ ಫೋಟೊಗೆ ಏನು ಬೆಲೆ ಇದೆ, ಭಾವನೆ ಮುಖ್ಯ' ಎಂದು ನಕ್ಕಳು. ಸೂರಿ ಮೂಕನಂತೆ ಬೆರಳಿನಿಂದ ಉಂಗುರ ತೆಗೆದು ಕೊಡಲು ಹೋದ. ಅವಳು ಕೈಬೆರಳನ್ನು ಮುಂದೆ ಮಾಡಿದಳು. ಸೂರಿ ಅದನ್ನು ಜೋನಿಯ ಬೆರಳಿಗೆ ತೊಡಿಸಿಯೆ ಬಿಟ್ಟ. ಯಾವುದೋ ಫಿಲಂ ಡಯಲಾಗ್ ನೆನಪಿಗೆ ಬಂದು, 'ಇದು ನಮ್ಮ ನಡುವಿನ ಬೇರ್ಪಡಿಸಲಾರದ ಬಂಧನ!' ಎಂದುಸಿರಿದ. ಅವಳು 'ಹೌದು' ಅನ್ನುವಂತೆ ತಲೆದೂಗಿದಳು. ದೂರದಲ್ಲಿ ಗಾಡಿಯಲ್ಲಿ ಕೂತ ಕೂತಂತೆಯೇ ಷರೀಫ ತೂಕಡಿಸುತ್ತಿದ್ದ. ಕುದುರೆ ನಡು ನಡುವೆ ಕಾಲು ಝಾಡಿಸುತ್ತ, ಕೆರೆಯುತ್ತ, ಹುಲ್ಲು ಮೇಯುತ್ತಿತ್ತು. ಜೋನಿ ಗಡಿಯಾರ ನೋಡುತ್ತ 'ನಡಿ, ಹೋಗೋಣ, ಹೊತ್ತಾಗುತ್ತೆ' ಅಂದಳು. ಗಾಡಿ ವಾಪಸ್ಸು ಊರ ಕಡೆ ಹೊರಟಿತು. ಈಗ ಸೂರಿ ಊರಿನ ಮಿಕ್ಕ ಸ್ಥಳಗಳ ಬಗ್ಗೆ ವಿವರಣೆ ಕೊಡುವ ಮೂಡಿನಲ್ಲಿರಲಿಲ್ಲ. ಜೋನಿಗೂ ಅದು ಬೇಕಾಗಿರಲಿಲ್ಲ. ಹೇಗೋ ಆದಷ್ಟು ಬೇಗ ರೈಲು ಹತ್ತಿದರೆ ಬದುಕಿದೆ ಅನ್ನುತ್ತಿತ್ತು ಅವಳ ಮನಸ್ಸು. ಈಗ ಕೈಯಲ್ಲಿ ಕೈಯಿಟ್ಟು ಹರಟುತ್ತಿದ್ದನು ಸೂರಿ, ಕೇಳುತ್ತಿದ್ದವಳು ಜೋನಿ.

> **ಆ ದಿನ ಸೂರಿ ತನ್ನ ಲೋಕದಿಂದ ಹೊರಬಂದು ತಾಯಿಯ ಕಡೆ ನೋಡಿದ. ಜೋನಿ ಬಂದ ಮೇಲೆ ತಾಯಿಯ ಕಡೆ ಗಮನ ಕೊಡುವುದಾಗಿಲ್ಲ. ಅವಳಿಗೇನೋ ನೋವಾಗಿದೆ ಅನ್ನಿಸಿತು. ಒಂದು ದಿನ ತಾನಾಗಿಯೇ ಅವಳ ಹತ್ತಿರ ಬಂದು ಕೂತು, ಪ್ರೀತಿಯಿಂದ ಮಾತಿಗೆ ಆರಂಭಿಸಿದ.**